<u>ದಿನಾಂಕ 17-01-2025 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>: ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಆರ್ ಎಸ್ ಟಿ ವಕೀಲರಿಂದ :</u>

1. ದಾವಾ ಸರ್ವೆ ನಂಬರ 49/1 ರ ಆಸ್ತಿಯನ್ನು 1974 ರಂದು ನನ್ನ ಮಾವನವರು ಖರೀದಿಸಿದರು. ಈ ಆಸ್ತಿಯ ಚಕ್ಕು ಬಂದಿ ಗೊತ್ತು. ಪೂರ್ವಕ್ಕೆ ಶಿವಪುತ್ರಪ್ಪ ರವರ ಜಮೀನು, ಪಶ್ಚಿಮಕ್ಕೆ ಬೆಳಗಾಲ ಗುಡ್ಡ, ಉತ್ತರಕ್ಕೆ ನಿಸ್ಸಿಮಪ್ಪ ದೇವಗಿರಿರವರ ಜಮೀನು ಮತ್ತು ದಕ್ಷಿಣಕ್ಕೆ ಅಪ್ಪಣ್ಣ ತಳವಾರ ರವರ ಜಮೀನು ಇದೆ. ಈ ಆಸ್ತಿಯನ್ನು ಖರೀದಿಸಿದ ನಂತರ ನನ್ನ ಮಾವ ಆತನ ಹೆಂಡತಿ ಮತ್ತು ಮಕ್ಕಳುಗಳು ಕೂಡಿಯೇ ವಹಿವಾಟು ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿಯು ಈಗ ನಾನು ಮತ್ತು ನನ್ನ ಗಂಡ ಮತ್ತು ಮಕ್ಕಳುಗಳು ವಹಿವಾಟು ಮಾಡುತ್ತಿದ್ದೇವೆ ಎಂದು ಸ್ವತಃ ನುಡಿಯುತ್ತಾರೆ. ನನ್ನ ಗಂಡ ಮೃತ ಪಟ್ಟ ನಂತರ ನಾನು ಮತ್ತು ನನ್ನ ಮಕ್ಕಳುಗಳು ವಹಿವಾಟು ಮಾಡುತ್ತಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ಆ ಆಸ್ತಿಯಲ್ಲಿ ವಾದಿಯರೇ ಮತ್ತು ಪ್ರತಿವಾದಿಯರೇ ಕೂಡಿಯೇ ವಹಿವಾಟು ಮಾಡುತ್ತಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ.

2. ದಾವ ಅನುಸೂಚಿ ಬಿ ರ ಆಸ್ತಿಯನ್ನು ಯಾವ ವರ್ಷ ಖರೀದಿಸಿದರು ಎಂಬುದು ನನಗೆ ಗೊತ್ತಿಲ್ಲ. ಆ ಆಸ್ತಿಯನ್ನು ನನ್ನ ಅತ್ತೆಯವರ 5 ಜನ ಅಕ್ಕ ತಂಗಿಯವರು ಖರೀದಿಸಿದರು. ಅವರುಗಳೆಂದರೆ ಇಮಾಂಬಿ ತಹಶೀಲ್ದಾರ, ಖಾತುನಬಿ ಲೋಹಾರ, ತಾಹೇರಾಬಿ ಕೋಟಿನ, ಜಹೇರಾಬಿ ಯಾವಗಲ್ ಮತ್ತು ಅಮೀನಾಬಿ ನಿಪ್ಪಾಣಿರವರು ಆಗಿರುತ್ತಾರೆ. ಈ ಆಸ್ತಿಯನ್ನು ಖರೀದಿಸಿದ ನಂತರ ಯಾವ ವರ್ಷ ವಾಟ್ನಿ ಮಾಡಿಕೊಂಡರು ಎಂದು ಈಗ ನನಗೆ ನೆನಪಿಲ್ಲ. ಸಾಕ್ಷಿಯು 2012 ರಲ್ಲಿ ವಾಟ್ನಿ ಮಾಡಿಕೊಂಡರು ಎಂದು ಆ ನಂತರ ನುಡಿಯುತ್ತಾರೆ. ಆ ವಾಟ್ನಿ ವ್ಯವಹಾರದಲ್ಲಿ ನಾನು ಸಹ ಭಾಗವಹಿಸಿದ್ದೇನು. ಈ ಆಸ್ತಿಯನ್ನು ವಾಟ್ನಿ ಪತ್ರದ ಮೂಲಕ ಹಿಸ್ಸೆ ಮಾಡಿಕೊಂಡರುತ್ತಾರೆ. ಆ ವಾಟ್ನಿ ಪತ್ರ ನೋಂದಣಿ ಆಗಿತ್ತೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆ ವಾಟ್ನಿ ಪತವನ್ನು ನಾನು ನೋಡಿರುತ್ತೇನೆ. ಈ ವಾಟ್ನಿ ಗೆ ಸಂಬಂಧಪಟ್ಟಂತೆ ವಾಟ್ನಿ ಪತ್ರ ವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ಈ ಬಗ್ಗೆ ಯಾವುದೇ ವಾಟ್ನಿ ಪತ್ರ ಹಾಜರು ಪಡಿಸದ್ದೇ ಇದ್ದರೂ ಸಹ ಹಾಜರು ಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕನ್ನಡ ಸ್ವಲ್ಪ ಸ್ವಲ್ಪ ಓದಲು ಬರುತ್ತದೆ. ಉರ್ದು ಸಂಪೂರ್ಣವಾಗಿ ಓದಲು ಮತ್ತು ಬರೆಯಲು ಬರುತ್ತದೆ. ಸರ್ವೆ ನಂಬರ 92/3 ರ ಆಸ್ತಿ ಖರೀದಿ ಮೂಲಕ ಬಂದ ಆಸ್ತಿಯಾಗಿರುತ್ತದೆ. ಆ ಆಸ್ತಿಯನ್ನು ಯಾರ ಮೂಲಕ ಖರೀದಿಸಿದರು ಎಂಬುದು ನನಗೆ ಈಗ ನೆನಪಿರುವುದಿಲ್ಲ. ಆ ಆಸ್ತಿಯ ವಿಸ್ತೀರ್ಣ 5 ಎಕರೆ 19 ಗುಂಟೆ ಆಗಿರುತ್ತದೆ. ಸರ್ವೆ ನಂಬರ 92/3 ರ ಆಸ್ತಿ ಈಗ ನನ್ನ ಹೆಸರಿನಲ್ಲಿ 1 ಎಕರೆ 19 ಗುಂಟೆ ಇರುತ್ತದೆ. ಈಗ ತೋರುತ್ತಿರುವ ನಿಡಿ-7 ರಲ್ಲಿ ದಸ್ತಗಿರಿಸಾಬ ಖಾಸೀಂಸಾಬ ಯಾವಗಲ್ ರವರ ಹೆಸರಿನಲ್ಲಿರುತ್ತದೆ. ನಿಡಿ-7 ರಲ್ಲಿ ನಮೂದಿಸಲಾದ ಆಸ್ತಿಗಳು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ.

3. ಈಗ ತೋರುತ್ತಿರುವ ದಾಖಲೆಯು ನನ್ನ ಅತ್ತೆ ಮತು ಆಕೆಯ ಅಕ್ಕ ತಂಗಿಯವರ ನಡುವೆ ವಾಟ್ನಿ ಮಾಡಿಕೊಂಡ ಬಗ್ಗೆ ತಮ್ಮ ತಮ್ಮ ಹೆಸರಿಗೆ ದಾಖಲೆ ಮಾಡಿಕೊಡುವಂತೆ ಕೋರಿ ತಹಶೀಲ್ದಾರರವರಿಗೆ ನೀಡಲಾದ ಅರ್ಜಿಯ ಪ್ರತಿಯಾಗಿರುತ್ತದೆ ಎಂದರೆ ಸರಿ. ಆ ದಾಖಲೆಯಲ್ಲಿರುವ ಉರ್ದುವಿನಲ್ಲಿ ಬರೆಯಲಾದ ಬರಹ ನನ್ನ ಅತ್ತೆ ಹೆಸರು ಜಹೇರಾಬಿ ಕೋಂ ಗೌಸುಸಾಬ ಯಾವಗಲ್ ಅಂತಾ ಇರುತ್ತದೆ ಎಂದರೆ ಸರಿ. ಅದು ನಿಪಿ-12 ಎಂದು ಗುರುತಿಸಲಾಯಿತು. ಈಗ ತೋರುತ್ತಿರುವ ನಿಡಿ-9 ರಲ್ಲಿರುವ ಸಹಿ ನನ್ನ ಅತ್ತೆ ಜಹೇರಾಬಿ ಕೋಂ ಗೌಸುಸಾಬ ಯಾವಗಲ್ ಅಂತಾ ಇರುತ್ತದೆ ಎಂದರೆ ಸರಿ. ಆ ಸಹಿ ಬಳಿ ತಿದ್ದಲಾದ ಅಕ್ಷರ ನನಗೆ ಕಣ್ಣು ಸರಿಯಾಗಿ ಕಾಣಿಸದೇ ಇರುವುದರಿಂದ ಗೊತ್ತಾಗುತ್ತಿಲ್ಲ.

4. ನನ್ನ ಮಾವನವರು ಸರ್ವೆ ನಂಬರ 49/1 ಮತ್ತು 92/4 ರ ಆಸ್ತಿಯನ್ನು ನನ್ನ ಗಂಡ ಹಾಗೂ ನನ್ನ ಮೈದುನನ ಹೆಸರಿಗೆ ಬದಲಾವಣೆಗೆ ಮಾಡಿಕೊಡುವ ಬಗ್ಗೆ ಸಲ್ಲಿಸಲಾದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ಅರ್ಜಿಯ ಜೊತೆ ಯಾವ ಯಾವ ದಾಖಲೆಗಳನ್ನು ಸಲ್ಲಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. ಈ ಬಗ್ಗೆ ಅರ್ಜಿಯನ್ನು ಯಾರು ಸಲ್ಲಿಸಿದ್ದರು ಎಂಬುದವರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಅತ್ತೆ ಮಾವಂದಿರು ಸರ್ವೆ ನಂಬರ 49/1 ಮತ್ತು 92/4 ರ ಆಸ್ತಿಗಳನ್ನು ನನ್ನ ಗಂಡ ಮತ್ತು ಮೈದುನ ಹೆಸರಿಗೆ ಖಾತಾ ಬದಲಾವಣೆ ಮಾಡಿಕೊಡುವ ಸಂಬಂಧ

ಯಾವುದೇ ಅರ್ಜಿಯನ್ನು ಸಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್